ಹಾಕಿಕೊಳ್ಳುವುದು ಪದ್ಧತಿ. ಆ ಸಮಯದಲ್ಲಿ ಮನೆಯಲ್ಲಿರುವ ಅಜ್ಜಿಯ ಅಥವಾ ಅಮ್ಮಂದಿರ ದುಬಾರಿ ಸೀರೆಗಳನ್ನೇ ಮನೆಯಲ್ಲಿರುವ ಪುಟ್ಟ ಪುಟ್ಟ ಹೆಣ್ಣು ಮಕ್ಕಳಿಗೆ ಲಂಗ ಜಾಕೇಟ್ ಹೊಲಿಸಿ ಹಾಕುವುದು ಮುಂಚಿನಿಂದಲೂ ರೂಢಿ. ಇದರಿಂದ ಅವರಿಗೂ ತೃಪ್ತಿ ಹಾಗೂ ಆ ಮಕ್ಕಳಿಗೂ ಅಜ್ಜಿಯ ಸೀರೆ ಎಂದರೆ ಎಲ್ಲಿಲ್ಲದ ಪ್ರೀತಿ. ಹೀಗೆ ಸಂಪ್ರದಾಯ ನಡೆದುಕೊಂಡು ಬಂದಿದೆ. ಅದೇ ಸಂಪ್ರದಾಯ ಇದೀಗ ಒಂದು ಹೊಸ ಟ್ರೆಂಡನ್ನೇ ಸೃಷ್ಟಿಸಿದೆ. ವರ್ಷವರ್ಷಕ್ಕೂ ಇಂಥಹುದೇ ಸೀರೆಗಳಲ್ಲಿ ಹೊಸ ಹೊಸ ವಿನ್ಯಾಸಗಳು ಅಪ್‌ಡೇಟ್ ಆಗುತ್ತಲೇ ಇವೆ. ಇವು ಇದೀಗ ಎಲ್ಲರ ಗಮನ ಸೆಳೆಯುತ್ತಿವೆ.

ಇತ್ತೀಚೆಗೆ ವಸ್ತ್ರ ವಿನ್ಯಾಸಕಾರರು ಸೀರೆಗಳಲ್ಲಿ ಲಂಗಗಳ ಬದಲಿಗೆ ಮಾಡರ್ನ್ ಲುಕ್ ನೀಡುವ ಲೆಹೆಂಗಾಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಟ್ಟಿದ್ದಾರೆ. ಅದು ಇದೀಗ ಭಾರೀ ಟ್ರೆಂಡಿಂಗ್‌ನಲ್ಲಿದೆ. ಹಾಗೇ ಕಸೂತಿ ಇರುವ ಸೀರೆಯನ್ನು ಲೆಹೆಂಗಾಗಳಿಗೆ ಉಪಯೋಗಿಸುತ್ತಿರುವುದರಿಂದ ಅವು ಇನ್ನೂ ಆಕರ್ಷಕವಾಗಿ ಕಾಣುತ್ತಿವೆ. ಮನಸ್ಸಿಗೆ ಹಾಗೂ ಅಭಿರುಚಿಗೆ ಅನುಗುಣವಾಗಿ ಈ ತರಹದ ಸೀರೆಗಳಲ್ಲಿಯೇ ವರೈಟಿ ವರೈಟಿ ಡ್ರೆಸ್‌ಗಳನ್ನು ಹೊಲಿಸಿಕೊಳ್ಳಬಹುದಾಗಿದೆ. ಸೀರೆಯಲ್ಲಿರುವ ಸುಂದರ ಚಿತ್ತಾರವನ್ನೇ ಉಪಯೋಗಿಸಿ ಸಲ್ವಾರ್ ಹೊಲಿಸಿಕೊಳ್ಳಬಹುದು, ಇನ್ನುಳಿದ ವಿನ್ಯಾಸಗಳು ಬೆನ್ನಿನ ಭಾಗಕ್ಕೆ, ತೋಳುಗಳ ಭಾಗಕ್ಕೆ ಬರುವಂತೆ ಮಾಡಿ ಆಕರ್ಷಕವಾದ ಕುರ್ತಿ ಹೊಲಿಸಿಕೊಳ್ಳಬಹುದು. ಒಂದು ಸೀರೆ ಸುಂದರವಾಗಿ ಕಾಣಬೇಕೆಂದರೆ ಅದು ಸೀರೆಯ ಪಲ್ಲು ಹಾಗೂ ಬಾರ್ಡರ್‌ನಿಂದ ಮಾತ್ರ.





## ಹಳೆಯ ಸೀರೆ- ಕೆಲವು ಟಿಪ್ಸ್.

ಎಲ್ಲಾ ಸೀರೆಗಳ ಪಲ್ಲುಗಳು ಸಾಕಷ್ಟು ಗ್ರ್ಯಾಂಡಾಗಿರುವುದರಿಂದ ಆ ಪಲ್ಲುಗಳನ್ನೇ ಉಪಯೋಗಿಸಿ ಆಕರ್ಷಕವಾಗಿ ಜಾಕೆಟ್ ಹೊಲಿಸಿಕೊಳ್ಳಬಹುದು. ನಿಮ್ಮ ಬಳಿ ಯಾವುದಾದರೂ ಪ್ಲೈನ್ ಸೆಲ್ವಾರ್ ಇದ್ದರೆ ಅದರ ಮೇಲೆ ಈ ಗ್ರ್ಯಾಂಡ್ ಜಾಕೆಟ್ ತೊಡಬಹುದು. ಅದು ನಿಮ್ಮ ಡ್ರೆಸ್‌ಗೆ ಒಂದು ಹೊಸ ಲುಕ್ ಅನ್ನೇ ನೀಡುತ್ತದೆ. ಸೀರೆ ಪ್ಲೈನ್ ಇದ್ದರೆ ಅದರಲ್ಲಿ ಇದೀಗ ಟ್ರೆಂಡಿಂಗ್‌ನಲ್ಲಿರುವ ಮೂರು ಲೇಯರ್‌ನ ಅನಾರ್ಕಲಿ ಕುರ್ತಿ ಹೊಲಿಸಿಕೊಂಡು ಎಲ್ಲಾ ಲೇಯರ್‌ಗಳಿಗೂ ಬಾರ್ಡರ್‌ಗಳನ್ನು ಹೊಲಿಸಿಕೊಳ್ಳಬಹುದು.

ನಿಮ್ಮ ನಿಮ್ಮ ಅಭಿರುಚಿಗೆ ಅನುಗುಣವಾಗಿ ಸಾಕಷ್ಟು ವೆರೈಟಿ ಉಡುಪುಗಳನ್ನು ಹೊಲಿಸಿಕೊಳ್ಳಬಹುದಾಗಿದೆ. ಸೀರೆ ತೆಳ್ಳಗಿದ್ದರೆ ಅದಕ್ಕೆ ಲೈನಿಂಗ್ ಹಾಕಿಸಿ ಸೆಲ್ವಾರ್ ಹೊಲಿಸಬಹುದು. ಇಲ್ಲವೇ ಅನಾರ್ಕಲಿ ಸಲ್ವಾರ್ ಹೊಲಿಸಿಕೊಳ್ಳಬಹುದು. ಸಲ್ವಾರ್‌ನ ಮೇಲಿನ ಭಾಗಕ್ಕೆ ಸೀರೆಯ ಜರಿ ಬಾರ್ಡರ್‌ನಿಂ ಬೇರೆ ಬೇರೆ ತರಹದ ಡಿಸೈನ್ ಮಾಡಿಸಿಕೊಳ್ಳಬಹುದು. ಇಲ್ಲವೇ ಮೇಲ್ಭಾಗ ಪೂರ್ಣ ಪ್ರಮಾಣದಲ್ಲಿ ಗ್ರ್ಯಾಂಡಾಗಿ ಕಾಣಬೇಕೆಂದು ಬಯಸುವವರು ಪಲ್ಲುವಿನಿಂದಲೇ ಸ್ಟಿಚ್ ಮಾಡಿಸಿಕೊಂಡು ಕೆಳಭಾಗ ಪ್ಲೈನ್ ಇಡಬಹುದು. ಪೂರ್ಣ ಪ್ರಮಾಣದಲ್ಲಿ ಪ್ಲೈನ್ ಡ್ರೆಸ್ ಕೂಡ ಹೊಲಿಸಿಕೊಂಡು ಅದಕ್ಕೆ ಬಾರ್ಡರ್ ಮಾತ್ರ ಉಪಯೋಗಿಸಬಹುದು. ಇನ್ನುಳಿದ ಬಟ್ಟೆಯನ್ನು ಚಿಕ್ಕ ಮಕ್ಕಳ ಫ್ರಾಕ್‌ಗೆ ಉಪಯೋಗಿಸಬಹುದು. ಹೀಗೆ ನಿಮ್ಮ ನಿಮ್ಮ ಅಭಿರುಚಿಗೆ ಅನುಗುಣವಾಗಿ ಸ್ಟಿಚ್ ಮಾಡಿಸಿಕೊಳ್ಳಬಹುದು. ಹೀಗೆ ಸೀರೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸಬಹುದು.

## ಮಧುರ ನೆನಪುಗಳು...

ಕೆಲವರಿಗೆ ಹಳೆಯ ಸೀರೆಗಳು ಎಂದರೆ ತುಂಬಾ ಅಚ್ಚುಮೆಚ್ಚು. ಅವುಗಳಲ್ಲಿ ಅವರ ಹಿಂದಿನ ನೆನಪುಗಳು ಸಾಕ್ಷಿರುತ್ತವೆ. ಮುಖ್ಯವಾಗಿ ಪರಂಪರಾಗತವಾಗಿ ಅಜ್ಜಿ ಹಾಗೂ ಅಮ್ಮನಿಂದ ಬಂದ ಬಳುವಳಿ ಸೀರೆಗಳು, ಮದುವೆಯಲ್ಲಿ ಧಾರೆಯ ಸೀರೆ, ಸೀಮಂತದ ಸೀರೆ, ಹಬ್ಬಕ್ಕೆ ಅಣ್ಣ ಕೊಟ್ಟ ಸೀರೆ... ಹೀಗೆ ಹಲವು ನೆನಪುಗಳನ್ನು ಹೊತ್ತ ಸೀರೆಗಳು ಪ್ರತಿ ಮಹಿಳೆಯ ಬಳಿಯೂ ಇದ್ದೇ ಇರುತ್ತವೆ. ಇಂಥ ಸೀರೆಗಳು ಡ್ಯಾಮೇಜ್ ಆದಾಗ ಅವುಗಳನ್ನು ಮೂಲೆಗುಂಪು ಮಾಡುವುದಕ್ಕಿಂತ ಹೊಸ ಮಾದರಿಯ ಉಡುಗೆ ಹೊಲಿಸಿ ಬಳಸುವುದೇ ಸೂಕ್ತ.

ಅಂಥ ಸೀರೆಗಳಲ್ಲಿ ಬಗೆಬಗೆಯ ಉಡುಪುಗಳನ್ನು ಹೊಲಿಸಿಕೊಳ್ಳಬಹುದು. ಕೆಲವರಿಗೆ ಒಂದೆರಡು ಬಾರಿ ಉಟ್ಟ ಸೀರೆ ಮತ್ತೆ ಉಡುವುದು ಬೇಸರದ ವಿಷಯ. ಅಂಥವರು ಅದರಿಂದ ಸಲ್ವಾರ್ ಸೂಟ್, ಲೆಹೆಂಗಾ, ಜೀನ್ಸ್ ಮೇಲೆ ಧರಿಸಲು ಲಾಂಗ್ ಕುರ್ತಿ, ಶಾರ್ಟ್ ಕುರ್ತಿ ಹೊಲಿಸಿಕೊಳ್ಳಬಹುದು.

ಸದಾ ಹೊಸ ಹೊಸ ಉಡುಪು ಧರಿಸಬೇಕೆಂದು ಬಯಸುವವರು ಅವರ ಜರಿ ಸೀರೆಗಳು ಹಾಳಾಗಿದ್ದರೆ, ಅವುಗಳಲ್ಲಿ ಚೆನ್ನಾಗಿ ಗಟ್ಟಿ ಭಾಗಗಳನ್ನು ತೆಗೆದು ಪ್ಲೈನ್ ಡ್ರೆಸ್‌ಗಳ ಮೇಲೆ ದುಪಟ್ಟಾ ಆಗಿ ಬಳಸಿದರೆ ಗ್ರಾಂಡ್ ಲುಕ್ ನೀಡುತ್ತದೆ. ಬಾರ್ಡರ್‌ಗಳನ್ನು ಬೇರೆ ಉಡುಗೆಗಳಿಗೆ ಮ್ಯಾಚಿಂಗ್ ಮಾಡಿ ಹೊಲಿಸಿಕೊಳ್ಳಬಹುದು.

ಸೀರೆ ಬರೀ ಉಡುಪುಗಳಿಗೆ ಮಾತ್ರವಲ್ಲ, ಇದೀಗ ರೇಷ್ಮೆ ಸೀರೆಯಲ್ಲಿ ಉಳಿದ ಚಿಕ್ಕ ಚಿಕ್ಕ ಬಟ್ಟೆಗಳನ್ನು ಉಪಯೋಗಿಸಿ ಸುಂದರವಾದ ಹ್ಯಾಂಡ್ ಬ್ಯಾಗ್, ಪರ್ಸ್‌ಗಳನ್ನು ತಯಾರಿಸಲಾಗುತ್ತಿದೆ. ಇವುಗಳೂ ಕೂಡ ತುಂಬಾ ಆಕರ್ಷಕವಾಗಿದ್ದು, ಯಾವುದಾದರೂ ಮದುವೆ ಅಥವಾ ಶುಭ ಕಾರ್ಯಕ್ರಮಗಳಿಗೆ ಹೋಗುವಾಗ ಗ್ರ್ಯಾಂಡ್ ಉಡುಪಿಗೆ ಮ್ಯಾಚ್ ಮಾಡಿ ತೆಗೆದುಕೊಂಡು ಹೋಗಬಹುದು.

ಕಾಟನ್ ಸೀರೆಗಳು ಹಳೆಯದಾಗಿದ್ದರೆ ಅವುಗಳನ್ನು ಕೈಚೀಲ, ಮಕ್ಕಳನ್ನು ಮಲಗಿಸುವ ಹಾಸಿಗೆ, ಕಾಲು ಒರೆಸುವ ಮ್ಯಾಟ್... ಹೀಗೆ ನಾನಾ ರೀತಿಯಾಗಿ ಉಪಯೋಗಿಸಬಹುದು. ಹಳೆಯ ಸೀರೆಗಳನ್ನು ಬಳಸಿ ಬೆಚ್ಚಗೆ ಹೊದ್ದುಕೊಳ್ಳುವ ಕೌದಿ ತಯಾರಿಸಿಕೊಳ್ಳಬಹುದು. ಹೀಗೆ ಹಳೆ ಸೀರೆ ಹೊಸ ಉಡುಪು ಸೇರಿಸಿ ಬಟ್ಟೆಗೆ ಹೊಸ ಮೆರುಗು ನೀಡಬಹುದು.